ಪ್ರೌಢಶಾಲೆಯಿಲ್ಲದಿದ್ದಲ್ಲಿ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜುಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು.

5) ಸಮೀಪದಲ್ಲಿರುವ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಮತ್ತು ಅಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ.

6) ಡಾ: ನಂಜುಂಡಪ್ಪ ವರದಿಯ ಆಧಾರದ ಮೇಲೆ ಶೈಕ್ಷಣಿಕ ಬೇಡಿಕೆ, ಅವಶ್ಯಕತೆ ಹಿಂದುಳಿದ ಪ್ರದೇಶಗಳಿಗೆ ಮತ್ತು ಅಗತ್ಯವಾದ ಸ್ಥಳಗಳಿಗೆ ಆದ್ಯತೆ ನೀಡುವುದು.

7) ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಮಂಜೂರಾತಿ ಕೋರಿ ಪ್ರಸ್ತಾವನೆಗಳು ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಬಂದಲ್ಲಿ ವಾರ್ಷಿಕ ಅನುದಾನದ ಹಣಕಾಸಿನ ಲಭ್ಯತೆ, ಶೈಕ್ಷಣಿಕ ಅಗತ್ಯತೆ ಇದ್ದಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲು ಕ್ರಮವಹಿಸಲಾಗುವುದು.

ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ನಿಗದಿಪಡಿಸಿರುವ ಮಾನದಂಡಗಳು ಈ ಕೆಳಕಂಡಂತಿವೆ.

1) 5 ಕಿ.ಮೀ. ಅಂತರದಲ್ಲಿ ಯಾವುದೇ ಪ್ರೌಢಶಾಲೆ ಇರಬಾರದು.

2) ಆಯವ್ಯಯದಲ್ಲಿನ ಹಣಕಾಸು ಲಭ್ಯತೆ ಮತ್ತು ಶೈಕ್ಷಣಿಕ ಅಗತ್ಯತೆಯನ್ನು ಅವಲಂಭಿಸಿ ಹೊಸ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗುವುದು.

3) ಕನಿಷ್ಟ 3 ಹಿರಿಯ ಪ್ರಾಥಮಿಕ ಶಾಲೆಗಳಿಂದ ಕನಿಷ್ಟ 50 ವಿದ್ಯಾರ್ಥಿಗಳು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. (ಗುಡ್ಡಗಾಡು ಮತ್ತು ಮಲೆನಾಡು ಪ್ರದೇಶದಲ್ಲಿ ಕನಿಷ್ಟ 25 ಮಕ್ಕಳು)

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (476)334**
**ಸದಸ್ಯರ ಹೆಸರು : ಶ್ರೀ ಸಿದ್ದುಸವದಿ (ತೇರದಾಳ್)**
**ಉತ್ತರಿಸುವ ಸಚಿವರು : (ಶ್ರೀ ಕೃಷ್ಣಯ್ಯ ಶೆಟ್ಟಿ)**
**: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು**

ಅ) ಜಮಖಂಡಿ ತಾಲ್ಲೂಕಿನ ತೇರದಾಳ ಆಶ್ರಯ ಯೋಜನೆಯಲ್ಲಿ 2002–03ರ ಸಾಲಿನಲ್ಲಿ 450 ಮನೆಗಳು ಮಂಜೂರು ಆಗಿ ಕಟ್ಟಡಗಳನ್ನು ಪ್ರಾರಂಭಿಸಿ 6 ವರ್ಷಗಳಾಗಿದ್ದರೂ ಇನ್ನೂ ಪೂರ್ಣಗೊಳಿಸದಿರಲು ಕಾರಣಗಳೇನು;

ಜಮಖಂಡಿ ತಾಲ್ಲೂಕಿನಲ್ಲಿ ಬರುವ ತೇರದಾಳ ಪಟ್ಟಣ ಪ್ರದೇಶಕ್ಕೆ ನಗರ ಆಶ್ರಯ ಯೋಜನೆಯಡಿ 2002–03ನೇ ಸಾಲಿನಲ್ಲಿ 454 ಮನೆಗಳು ಮಂಜೂರಾಗಿದ್ದು, ಈ ಮನೆಗಳನ್ನು ನಿರ್ಮಿಸಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಲಾಗಿದ್ದು. ನಿಗಮವು 404 ಮನೆಗಳನ್ನು ನಿರ್ಮಿಸಿದ ನಂತರ ಕಟ್ಟಡ ಸಾಮಗ್ರಿಗಳ ಬೆಲೆ ಹೆಚ್ಚಿಸುವುದರಿಂದ ಉಳಿದ 50 ಮನೆಗಳನ್ನು ನಿರ್ಮಿಸಲು ಹೆಚ್ಚುವರಿ ಅನುದಾನವನ್ನು ನೀಡಬೇಕೆಂದು ಕೋರಿರುತ್ತಾರೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಆ) ಕಟ್ಟಡದ ಸಂಪೂರ್ಣ ಕೆಲಸವನ್ನು ಮುಗಿಸಿ ಎಂದಿನಿಂದ ಹಂಚಿಕೆ ಮಾಡಲಾಗುವುದು.

ಕರ್ನಾಟಕ ಭೂಸೇನಾ ನಿಗಮ ಎಲ್ಲಾ ಮನೆಗಳನ್ನು ನಿರ್ಮಿಸಿದ ನಂತರ ಹಂಚಿಕೆ ಮಾಡಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಇ) ಪ್ರಸ್ತುತ ಎಷ್ಟು ಮನೆಗಳನ್ನು ಕಟ್ಟಲಾಗಿದೆ; ಉಳಿದವುಗಳನ್ನು ಎಂದಿನಿಂದ ಕಟ್ಟಿಸಲಾಗುವುದು;

ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಲಾದ 454 ಮನೆಗಳಲ್ಲಿ 404 ಮನೆಗಳು ನಿರ್ಮಾಣವಾಗಿದ್ದು, ಇದರಲ್ಲಿ 50 ಮನೆಗಳನ್ನು ಪೂರ್ಣಗೊಳಿಸದೆ ಬಿಡಲಾಗಿದೆ. ಈ ಸಮಸ್ಯೆಯನ್ನೂ ಪರಿಹರಿಸಿ, ಮನೆಗಳನ್ನು ಪೂರ್ಣಗೊಳಿಸುವ ವ್ಯವಸ್ಥೆ ಮಾಡಲು ಜಿಲ್ಲಾಧಿಕಾರಿಗಳು ಪ್ರಯತ್ನ ಮಾಡುತ್ತಾರೆ.

ಈ) ಈ ಯೋಜನೆಯಲ್ಲಿ ಮೂಲ ಕ್ರಿಯಾ ಯೋಜನೆಯಲ್ಲಿ ಯಾವ ಯಾವ ಕೆಲಸಗಳಿವೆ; ಗುತ್ತಿಗೆದಾರರಿಗೆ ಇಲ್ಲಿಯವರೆಗೆ ನೀಡಲಾದ ಹಣ ಎಷ್ಟು;

ಈ ಯೋಜನೆಯ ಮೂಲ ಕ್ರಿಯಾ ಯೋಜನೆಯಲ್ಲಿ ಮನೆ ನಿರ್ಮಾಣ ಸೇರಿದ್ದು, ಇಲ್ಲಿಯವರೆಗೆ ಗುತ್ತಿಗೆದಾರನಿಗೆ ರೂ. 113.50 ಲಕ್ಷ ಹಣವನ್ನು ಬಿಡುಗಡೆ ಮಾಡಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಉ) ಈ ಮನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ನಿಯಮಾನುಸಾರ ಮಾಡಲಾಗಿದೆ (ಸಂಪೂರ್ಣ ವಿವರ ಒದಗಿಸುವುದು)

ಈ ಫಲಾನುಭವಿಗಳನ್ನು ತೇರದಾಳ ಆಶ್ರಯ ಕಮಿಟಿಯು ಸರ್ಕಾರದ ಆದೇಶ ಸಂಖ್ಯೆ: ವ.ಏ 42 ಹೆಚ್‌ಎಮ್ 99 ಬೆಂಗಳೂರು ದಿನಾಂಕ:10.05.2000 ದಲ್ಲಿ ತಿಳಿಸಿರುವ ನಿಯಮಗಳ ಮೇರೆಗೆ ದಿನಾಂಕ 07.12.2002ರಲ್ಲಿ ಠರಾವು ಸಂಖ್ಯೆ 6,ರ ಮುಖಾಂತರ ಅನುಮೋದಿಸಿ ಆಯ್ಕೆ ಮಾಡಲಾಗಿದೆ.